# ಅಪೂರ್ವ ಕನಸು!

ಆಕಸ್ಮಿಕವಾಗಿ ಸಿನಿಮಾ ಜಗತ್ತಿಗೆ ಬಂದು, ನಟನೆಯ ಮೇಲೆ ಅಪಾರ ಪ್ರೀತಿ ಬೆಳೆಸಿಕೊಂಡಿರುವ ಅಪೂರ್ವ ಅವರಿಗೆ ಸಾಕಷ್ಟು ಅವಕಾಶಗಳೂ ಬರುತ್ತಿವೆ. ಈ ಅವಕಾಶಗಳ ಮೂಲಕ ತನ್ನ ಗುರುತನ್ನು ಗಟ್ಟಿಯಾಗಿ ಮೂಡಿಸುವ ಛಲ ಮತ್ತು ಪ್ರತಿಭೆ ಎರಡೂ ಅವರಲ್ಲಿದೆ.

■ ಪದ್ಮನಾಭ ಭಟ್

‘ಸಿನಿಮಾ ನನ್ನ ಪಾಲಿಗೆ ತಾಯಿ ಇದ್ದ ಹಾಗೆ. ಎಲ್ಲೋ ಇದ್ದವಳನ್ನು ಬದುಕು ಇಲ್ಲಿಗೆ ಕರೆದುಕೊಂಡು ಬಿಟ್ಟಿದೆ ಎಂದರೆ ಇಲ್ಲಿ ಏನೋ ವಿಶೇಷ ಇರಲೇಬೇಕು. ಎಷ್ಟೊಂದು ಜನರು ನಟಿಯಾಗಬೇಕು ಎಂದು ಕನಸು ಕಾಣುತ್ತಾರೆ. ಆದರೆ ಆ ಅವಕಾಶ ನನಗೆ ಅನಾಯಾಸವಾಗಿ ಸಿಕ್ಕಿದೆ. ಹಾಗಾಗಿ ಈ ದಾರಿಯನ್ನು ನಾನು ಯಾವತ್ತೂ ಬಿಟ್ಟುಕೊಡುವುದಿಲ್ಲ. ನಟನೆ, ನಿರ್ಮಾಣ, ನಿರ್ದೇಶನ ಹೀಗೆ ಏನಾದರೂ ಮಾಡುತ್ತ ಇಲ್ಲಿಯೇ ಇರುತ್ತೇನೆ. ಇಲ್ಲಿಯೇ ಬೆಳೆಯುತ್ತೇನೆ’ ಎನ್ನುವಾಗ ಅಪೂರ್ವ ಅವರ ಧ್ವನಿ ಭಾವುಕತೆಯಿಂದ ತೊಯ್ದಿತ್ತು.

ಅಪೂರ್ವ ಹುಟ್ಟಿ ಬೆಳೆದಿದ್ದೆಲ್ಲ ಕಡೂರು ಸಮೀಪದ ಒಂದು ಹಳ್ಳಿಯಲ್ಲಿ. ಹತ್ತನೆ ತರಗತಿಯವರೆಗೂ ಅಲ್ಲಿಯೇ ಓದಿದ ಅವರು ನಂತರ ಬಿ.ಕಾಂ. ಓದಲು ಮೈಸೂರಿಗೆ ಬಂದರು. “ನಾನು ಚೆನ್ನಾಗಿದ್ದೀನಿ ಅಂತಲೋ ಅಥವಾ ಕನ್ನಡವನ್ನು ಸ್ಪಷ್ಟವಾಗಿ ಮತ್ತು ವೇಗವಾಗಿ ಮಾತಾಡುತ್ತಿದ್ದೆ, ಓದುತ್ತಿದ್ದೆ ಎಂಬ ಕಾರಣಕ್ಕೋ ಗೊತ್ತಿಲ್ಲ. ಶಾಲೆ, ಕಾಲೇಜಿನಲ್ಲಿ ನನ್ನ ಸ್ನೇಹಿತರೆಲ್ಲರೂ ‘ಹೀರೊಯಿನ್’ ಎಂಬ ಅಡ್ಡಹೆಸರಿನಿಂದಲೇ ಕರೆಯುತ್ತಿದ್ದರು. ಆದರೆ ಆಗೆಲ್ಲ ನನಗೆ ಸಿನಿಮಾದಲ್ಲಿ ನಟಿಸಬೇಕು ಎಂಬ ಆಸೆಯಾಗಲಿ, ನಟನೆಯ ಕನಸಾಗಲಿ ಇರಲಿಲ್ಲ. ಆದರೆ ಕಾಲೇಜಿನ ಎಲ್ಲ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುತ್ತಿದ್ದೆ. ಕಾಲೇಜು ದಿನಗಳೇ ಹಾಗೆ, ಅಲ್ಲಿ ರ‍್ಯಾಂಪ್ ವಾಕ್, ಫೋಟೊಶೂಟ್ ಎಲ್ಲವನ್ನೂ ಮಾಡುತ್ತಿದ್ದೆವು. ಹೀಗೆ ನಾವು ಮೂರು ನಾಲ್ಕು ಹುಡುಗಿಯರ ಒಂದಿಷ್ಟು ಫೋಟೊಗಳನ್ನು ನನ್ನ ಸ್ನೇಹಿತರು ರವಿಚಂದ್ರನ್ ಅವರಿಗೆ ಕಳಿಸಿದ್ದರು. ಆಗ ಅವರು ‘ಅಪೂರ್ವ’ ಸಿನಿಮಾಗೆ ನಾಯಕಿ ಹುಡುಕಾಟದಲ್ಲಿದ್ದರು. ನನಗೆ ಆಡಿಷನ್‌ಗೆ ಕರೆಬಂತು. ಅಮ್ಮನ ಜೊತೆಗೆ ಬೆಂಗಳೂರಿಗೆ ಹೋದೆ. ಆಡಿಷನ್ ನಡೆಯುವ ಜಾಗದಲ್ಲಿ ಮುನ್ನೂರು – ನಾನೂರು ಜನರಿದ್ದರು. ಹೋದ ಕೂಡಲೇ ನನಗೆ ಮೇಕಪ್ ಮಾಡಿದರು. ಅಷ್ಟಾಗಿ ಮೇಕಪ್ ಮಾಡಿಕೊಂಡು ಗೊತ್ತಿರದ ನನಗೆ ನನ್ನ ಗುರುತೇ ಸಿಗದ ಹಾಗಾಗಿತ್ತು. ನಂತರ ಕ್ಯಾಮೆರಾ ಎದುರಿಗೆ ತೆಗೆದುಕೊಂಡು ಹೋಗಿ ನಿಲ್ಲಿಸಿದರು. ಒಂದು ಕಡೆಯಿಂದ ಲೈಟ್, ಇನ್ನೊಂದು ಕಡೆಯಿಂದ ಕ್ಯಾಮೆರಾ, ಮತ್ತೊಂದು ಕಡೆಯಿಂದ ಗಾಳಿ ಹಾಕ್ತಿದಾರೆ, ನನ್ನ ಉಡುಪಿನ ಕಾಲ ಒಂದು ಬದಿಯಲ್ಲಿ ತೆರೆದುಕೊಂಡಿತ್ತು. ಅದರಲ್ಲಿ ನನ್ನ ಕಾಲು ಕಾಣಿಸುತ್ತಿದೆ ಎಂದು ಮುಜುಗರವಾಗುತ್ತಿತ್ತು. ಭಯವಾಯ್ತು. ಅದೆಲ್ಲ ಮುಗಿದ ಮೇಲೆ ರವಿಚಂದ್ರನ್ ಅವರು ‘ಈ ಹುಡುಗಿ ಸರಿಹೊಂದಲ್ಲ’ ಎಂದು ಹೇಳಿ ತಿರುಗಿ ಕಳಿಸಿಬಿಟ್ಟರು. ಅದಾಗಿ ಆರು ತಿಂಗಳ ನಂತರ ಮತ್ತೆ

# ಅತಿರಸ ಅಮಾಯಕ ಮತ್ತು ಮಾಸ್‌ಬಾಸ್!

ತೆರೆಯ ಮೇಲೆ ನವರಸಗಳ ಕೋಡಿ ಹರಿಸುವ ಮೂಲಕ, ಟ್ವಿಟರ್‌ನಲ್ಲಿ ರಾಯರ ಅಲಂಕಾರದ ಫೋಟೊ ಹಾಕುತ್ತ, ಅಭಿಮಾನಿಗಳಿಗೆ ಹಿತೋಪದೇಶ ನೀಡುತ್ತ, ಆಗಾಗ ಹಳೆಯ ನೆನಪುಗಳಿಗೆ ಪರಕಾಯ ಪ್ರವೇಶ ಮಾಡುತ್ತ ಪ್ರಸನ್ನಚಿತ್ತರಾಗಿದ್ದ ‘ಅತಿರಸ ಅಮಾಯಕ’ ಬಿರುದಾಂಕಿತ ಕಟ್ಟಕಡೆಯ ಹಿರಿಯ ನಟರೊಬ್ಬರು ಕೆಲವು ದಿನಗಳಿಂದ ಸಖತ್ ಸುದ್ದಿಯಲ್ಲಿದ್ದಾರೆ. ಈ ಸುದ್ದಿಯ ಇನ್ನೊಂದು ತುದಿಯಲ್ಲಿರುವುದು ಮಾಸ್‌ಬಾಸ್ ಸ್ಟಾರ್ ನಟನ ಅಭಿಮಾನಿಗಳು.

ನಡೆದಿದ್ದಿಷ್ಟು: ಅವರು ಮತ್ತು ಸಿನಿಮಾ ನಿರ್ಮಾಪಕರೊಬ್ಬರ ನಡುವೆ ನಡೆದಿರುವ ಸಂಭಾಷಣೆಯ ತುಣುಕೊಂದು ಇತ್ತೀಚೆಗೆ ಸೋಷಿಯಲ್ ಮೀಡಿಯಾದಲ್ಲಿ ವೈರಲ್ ಆಗಿತ್ತು. ಅದರಲ್ಲಿ ‘ಅತಿರಸ ಅಮಾಯಕ’ ನಟ ಹೊಡೆದ ಹಲವು ಡೈಲಾಗ್‌ಗಳಲ್ಲಿ ಒಂದು ಡೈಲಾಗ್ ಮತ್ತೊಬ್ಬ ಮಾಸ್‌ಬಾಸ್ ನಟನ ಅಭಿಮಾನಿಗಳನ್ನು ಕುರಿತದ್ದಾಗಿತ್ತು. ಇದು ಆ ‘ಬಾಸ್’ ಅಭಿಮಾನಿಗಳನ್ನು ಕೆರಳಿಸಿತ್ತು ಕೂಡ. ಅದಾಗಿ ಕೆಲವೇ ದಿನಗಳಲ್ಲಿ ‘ಬಾಸ್’ ಹುಟ್ಟಿದ ದಿನಕ್ಕೆ ‘... ಅಮಾಯಕ’, ಟ್ವಿಟರ್‌ನಲ್ಲಿ ಶುಭಾಶಯ ಕೋರಿದ್ದೂ, ಅದಕ್ಕೆ ಬಾಸ್ ಧನ್ಯವಾದ ಅರ್ಪಿಸಿದ್ದೂ ನಡೆದಿತ್ತು. ಅಮಾಯಕ ನಟ ತನ್ನ ಆಪ್ತೇಷ್ಟರ ಮುಂದೆ ಬಲಗೈನ ತೋರುಬೆರಳು ಮಧ್ಯಬೆರಗಳುಗಳನ್ನು ತಿರುಗಿಸಿ ತಿರುಗಿಸಿ ತೋರಿಸುತ್ತ, ‘ಹೆಂಗೆ ನಾನು... ತಿರುಗಿಸ್ಬುಟ್ಟೆ’ ಎಂದು ಕೊಚ್ಚಿಕೊಂಡು ನಕ್ಕಿದ್ದೂ ಆಗಿತ್ತು. ಇದನ್ನು ನೋಡಿ ‘ಆಹಾ, ಏನೋ ಆಗುತ್ತದೆಂದುಕೊಂಡಿದ್ದೆವು. ಏನೂ ಆಗದೆಯೇ ಎಲ್ಲವೂ ಮುಗಿದುಹೋಯ್ತು’ ಎಂದು ಗಾಂಧಿನಗರದ ಕೆಲವು ಮಂದಿ ಸಮಾಧಾನದಿಂದಲೂ ಇನ್ನು ಕೆಲವು ಮಂದಿ ನಿರಾಸೆಯಿಂದಲೂ ನಿಟ್ಟುಸಿರುಬಿಟ್ಟಿದ್ದರು.

ಆದರೆ ಅಲ್ಲಿಗೆ ಎಲ್ಲವೂ ಮುಗಿಯಲಿಲ್ಲ. ಮೈಸೂರಿನಲ್ಲಿ ‘ಕಡ್ಲೆಪುರಿ’ ಚಿತ್ರದ ಚಿತ್ರೀಕರಣದಲ್ಲಿ ಮಗ್ನರಾಗಿದ್ದ ಸೀನಿಯರ್ ನಟ ‘... ಅಮಾಯಕ’ರನ್ನು ‘ಬಾಸ್’ ಅಭಿಮಾನಿಗಳ ಗುಂಪೊಂದು ಇದ್ದಕ್ಕಿದ್ದ ಹಾಗೆ ಸುತ್ತುವರಿದು ಕಂಗಾಲು ಮಾಡಿದ್ದರು. ಈಗಿಂದೀಗಲೇ ಕ್ಷಮೆ ಕೋರುವಂತೆ ಮಾಸ್ ಸ್ಟೈಲಲ್ಲೇ ಆಗ್ರಹವನ್ನೂ ಮಾಡಿದ್ದರು. ಆಪ್ತರ ಮುಂದೆ ತಿರುಗಿಸಿದ್ದ ಬೆರಳುಗಳು ಬಾಸ್ ಅಭಿಮಾನಿಗಳ ಮುಂದೆಯೂ ತಿರುಗಿಸಹೊರಟು ತಮ್ಮ ‘ಅತಿರಸ ನಟನಾಚಾತುರ್ಯ’ವೆಲ್ಲವನ್ನೂ ಪ್ರಯೋಗಿಸಿದರೂ ಬಾಸ್ ಅಭಿಮಾನಿಗಳು ಜಗ್ಗಲಿಲ್ಲ. ‘... ಅಮಾಯಕ’ರನ್ನು ಜಗ್ಗಿ ನಿಲ್ಲಿಸಿ ಕ್ಷಮೆ ಕೇಳಿಸಿಯೇ ಬಿಟ್ಟರು. ಯಥಾಪ್ರಕಾರ ಅವರು ಕ್ಷಮೆ ಕೇಳಿದ್ದೂ ಅಷ್ಟೇ ವೈರಲ್ ಆಯ್ತು. ಬಾಸ್ ಅಭಿಮಾನಿಗಳಿಂದ ಜೀವ ಕೈಯಲ್ಲಿ ಹಿಡಿದು ನುಸುಳಿಹೋದ ‘ಅಮಾಯಕ’ ನಟನಿಗೆ ಮನೆ ಸೇರಿಕೊಂಡಿದ್ದೇ ಪೌರುಷ ಜಾಗೃತವಾಯ್ತು. ‘ನಾನು ಅಪ್ಪಂಗೆ ಹುಟ್ಟಿದ ಮಗ’ ಎಂಬ ಸಂಗತಿಯನ್ನು ಜಗತ್ತಿಗೆ ಮೊದಲಬಾರಿಗೆ ಜಾಹೀರು ಮಾಡಿ ವೀರಾವೇಶದ ವಿಡಿಯೊವೊಂದನ್ನು ಸೋಷಿಯಲ್ ಮೀಡಿಯಾದಲ್ಲಿ ಹರಿಬಿಟ್ಟರು. ತಮಗೆ ಕರ್ನಾಟಕದಾದ್ಯಂತ 165ಕ್ಕೂ ಅಧಿಕ ಅಮಾಯಕ ಅಭಿಮಾನಿ ಸಂಘಗಳಿರುವುದನ್ನೂ ಮೊಟ್ಟಮೊದಲ ಬಾರಿಗೆ ಘೋಷಿಸಿ ಎದುರಾಳಿಗಳನ್ನು ಥರಥರ ನಡುಗುವಂತೆ ಮಾಡಿದರು.

ಅವರ ಗರ್ಜನೆಯ ಧ್ವನಿ ತುದಿ ಮುಟ್ಟಿತೋ ಎಂಬಂತೆ ಮತ್ತೊಂದು ಟೀವಿ ಸಂದರ್ಶನದಲ್ಲಿ ಸ್ವತಃ ‘ಮಾಸ್‌ಬಾಸ್’ ಪ್ರತ್ಯಕ್ಷರಾದರು. ಈ ವಿಷಯದಲ್ಲಿ ಕೇಳಲಾದ ಪ್ರಶ್ನೆಗೆ, ತೂಗುಯ್ಯಾಲೆಯಲ್ಲಿ